# ಜಿಲ್ಲಾ ಪಂಚಾಯತ ಕಾರ್ಯಾಲಯ, ಧಾರವಾಡ

ದೂರವಾಣಿ ಸಂಖ್ಯೆ:0836-2742221 Email: dszpdharwad@gmail.com

ಸಂಖ್ಯೆ:ಧಾಜಿಪ/ಉಕಾ/ಸಿ-10/ಸಿಆರ್ /2024-25 /1991 ದಿನಾಂಕ:14-09-2024.

## ಅಧಿಸೂಚನೆ

ವಿಷಯ: ಧಾರವಾಡ ಜಿಲ್ಲೆಯ ಗ್ರಾಮ ಪಂಚಾಯತಿಯಲ್ಲಿ ಬರುವ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗೆ ನೇಮಕಾತಿ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ: RDPR/156/ಜಿಪಿಎ/2022 (ಇ), ದಿ: 14-11-2022
2. ಸರ್ಕಾರದ ಪತ್ರ ಸಂ:ಕಪಂರಾಅ/ಅಭಿವೃದ್ಧಿ/652/2022 ದಿ:28-12-2022
3. ಸರ್ಕಾರದ ಆದೇಶ ಸಂ: KPRC-DEV/544/2021 ಬೆಂಗಳೂರು ದಿ:19-12-2022
4. ಸರ್ಕಾರಿ ಆದೇಶ ಸಂ:ಸಿಆಸುಇ1 ಸಹಿಮ 2022, ದಿ: 28-12-2022
5. ಸರ್ಕಾರಿ ಆದೇಶ ಸಂ: ಸಿಆಸುಇ02ಸಹಿಮ 2023 ದಿನಾಂಕ: 08-03-2023
6. ಸರ್ಕಾರದ ಆದೇಶ ಸಂ: RDPR 425 ಜಿಪಅ 2023 ದಿನಾಂಕ:16-08-2023.
7. ಮುಖ್ಯ ಗ್ರಂಥಾಲಯಾಧಿಕಾರಿಗಳು, ಜಿಲ್ಲಾ ಕೇಂದ್ರ ಗ್ರಂಥಾಲಯ, ಧಾರವಾಡ ಇವರ ಪತ್ರ ಸಂ:ಜಿಕೆಗ್ರಂಧಾ/ಅವಿ/ಗ್ರಾಪಂಗ್ರಂ/ಕಾಹುಮಾ/2023-24/263 ದಿ: 17-09-2024.

*******

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಸೇವಾ) ನಿಯಮಗಳು 2022ನ್ನು ಉಲ್ಲೇಖ (01) ಅಧಿಸೂಚನೆಯಂತೆ ಜಾರಿಗೊಳಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿರುವಂತೆ ಜಾರಿಯಲ್ಲಿರುವ ನಿಯಮಗಳಡಿ ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಖಾಲಿ ಇರುವ ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಉಲ್ಲೇಖ (02) ರಲ್ಲಿ ನಿರ್ದೇಶಿಸಲಾಗಿದೆ.

ಧಾರವಾಡ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಮಂಜೂರಾದ ಗ್ರಾಮ ಪಂಚಾಯತ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗಳನ್ನು ಸರಕಾರಿ ಅಧಿಸೂಚನೆ ಸಂ:/156/ಜಿಪಿಎ/2022 (ಇ), ದಿ: 14-11-2022 ರನ್ವಯ ಹಾಗೂ ಸರ್ಕಾರದ ಆದೇಶ ಸಂ: KPRC-DEV/544/2021, ದಿ: 19-12-2022 ರನ್ವಯ ಉಲ್ಲೇಖ(7) ರಲ್ಲಿ ಮುಖ್ಯ ಗ್ರಂಥಾಲಯಾಧಿಕಾರಿಗಳು, ಜಿಲ್ಲಾ ಕೇಂದ್ರ ಗ್ರಂಥಾಲಯ, ಧಾರವಾಡ ಇವರು ಸಲ್ಲಿಸಿದ ಮಾಹಿತಿಯನ್ವಯ (ಉಲ್ಲೇಖ-2ರಲ್ಲಿ ಮಂಜೂರಾದ ಹೊಸ ಗ್ರಂಥಾಲಯಗಳು ಸೇರಿದಂತೆ) ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನಲ್ಲಿ 07 ಹುದ್ದೆಗಳು, ಹುಬ್ಬಳ್ಳಿ ತಾಲೂಕಿನಲ್ಲಿ 07 ಹುದ್ದೆಗಳು, ಕುಂದಗೋಳ ತಾಲೂಕಿನಲ್ಲಿ 06 ಹುದ್ದೆಗಳು, ನವಲಗುಂದ ತಾಲೂಕಿನಲ್ಲಿ 06 ಹುದ್ದೆಗಳು, ಕಲಘಟಗಿ ತಾಲೂಕಿನಲ್ಲಿ 02, ಅಳ್ನಾವರ ತಾಲೂಕಿನಲ್ಲಿ 02 ಹಾಗೂ ಅಣ್ಣಿಗೇರಿ ತಾಲೂಕಿನಲ್ಲಿ 02 ಹುದ್ದೆಗಳು, ಒಟ್ಟು 32 ಹುದ್ದೆಗಳು ಖಾಲಿ ಇರುತ್ತವೆ.

ಅದರಂತೆ ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಿದ ಮಾರ್ಗಸೂಚಿಯಂತೆ, ಸರ್ಕಾರಿ ಆದೇಶ ಸಂ:ಕ.ಪಂ.ರಾ.ಅ/ಅಭಿವೃದ್ಧಿ/652/2022 ದಿನಾಂಕ:28-12-2022ರನ್ವಯ ನೇರ ನೇಮಕಾತಿ ಪ್ರಕ್ರಿಯೆಯಂತೆ ಸರ್ಕಾರಿ ಆದೇಶ ಸಂ: ಸಿಆಸುಇ1 ಸಹಿಮ 2022 ದಿನಾಂಕ: 28-12-2022 ರಲ್ಲಿ ನೀಡಿದ ರೋಷ್ಟರ್ ಬಿಂದುವಿನ ಅನ್ವಯ, ಸರ್ಕಾರಿ ಆದೇಶ ಸಂ: ಸಿಆಸುಇ02 ಸಹಿಮ ರನ್ವಯ 2023 ದಿನಾಂಕ:08-03-2023 ರ ಸಮತಳ ಮೀಸಲಾತಿಯನ್ವಯ ಸದರಿ ಹುದ್ದೆಗಳನ್ನು ಭರ್ತಿಮಾಡಬೇಕಾದ ಪ್ರಯುಕ್ತ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಈ ಕೆಳಗಿನಂತೆ ಖಾಲಿ ಇರುವ 32 ಗ್ರಾಮ ಪಂಚಾಯಿತಿಗಳ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗಳನ್ನು ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯ ಕಂಡಿಕೆ-10ರಂತೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಜೋಡಿಸಿ ರೋಸ್ಟರ್ ಬಿಂದುವಿನ ಪ್ರಕಾರ ನಿಗದಿಪಡಿಸಿದೆ.

ಈ ಕೆಳಗಿನ ಕೋಷ್ಟಕ-1 ರಲ್ಲಿ ನಮೂದಿಸಿದಂತೆ, ಗ್ರಾಮ ಪಂಚಾಯತ ಗ್ರಂಥಾಲಯಗಳ ಮೇಲ್ವಿಚಾರಕರ ಹುದ್ದೆಗಳು ಖಾಲಿ ಇದ್ದು ಹುದ್ದೆ ತುಂಬಲು ಸರಕಾರಿ ಆದೇಶದಡಿಯಲ್ಲಿ ಮೀಸಲಾತಿ (ರೋಷ್ಟರ್ ಪದ್ಧತಿ) ಯಂತೆ ಸದರಿ ಹುದ್ದೆಗೆ ಈ ಕೆಳಗಿನಂತೆ ಮೀಸಲಾತಿ ಕಲ್ಪಿಸಲಾಗಿದೆ.

## ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕ... ಗುರುತಿಸಿದ ವಿವರ
## ರೋಷ್ಟರ ಬಿಂದು ಮತ್ತು ಸಮತಳ ಮೀಸಲಾತಿ

| ಕ್ರ.ಸಂ | ತಾಲೂಕು | ಗ್ರಾಮ ಪಂಚಾಯತಿ ಹೆಸರು | ಖಾಲಿಯಾದ ಸ್ವರೂಪ | ಖಾಲಿಯಾದ ದಿನಾಂಕ | ಮೀಸಲಾತಿ ಬಿಂದು | ಸಮತಳ ಬಿಂದು | Roaster Points | Hortital Points |
|---|---|---|---|---|---|---|---|---|
| 1 | ಧಾರವಾಡ | ಕಲಕೇರಿ | ರಾಜೀನಾಮೆ | 15-06-2010 | ಪ.ಜಾ | ಇತರೆ | SC | OTHER |
| 2 | ನವಲಗುಂದ | ಹೆಬ್ಬಾಳ | ರಾಜೀನಾಮೆ | 04-03-2015 | ಸಾ.ಅ | ಇತರೆ | GM | OTHER |
| 3 | ಧಾರವಾಡ | ಮಾಧನಬಾವಿ | ಮರಣ | 14-04-2017 | ಪ.ಪಂ | ಇತರೆ | ST | OTHER |
| 4 | ನವಲಗುಂದ | ಜಾವೂರ | ಮರಣ | 21-01-2018 | ಸಾ.ಅ | ಮ.ಅ | GM | WOMEN |
| 5 | ಧಾರವಾಡ | ನಿಗದಿ | ನಿವೃತ್ತಿ | 31-01-2018 | ಪ್ರವರ್ಗ(1) | ಇತರೆ | C- I | OTHER |
| 6 | ಕುಂದಗೋಳ | ಯಲಿವಾಳ | ಮರಣ | 28-09-2018 | ಸಾ.ಅ | ಗ್ರಾ.ಅ | GM | RURAL |
| 7 | ಕುಂದಗೋಳ | ಬು.ತರ್ಲಘಟ್ಟ | ಮರಣ | 01-10-2018 | ಪ್ರವರ್ಗ(2ಎ) | ಇತರೆ | C-II(A) | OTHER |
| 8 | ಧಾರವಾಡ | ಕೋಟೂರ | ಖಾಲಿ ಹುದ್ದೆ | 05-07-2019 | ಸಾ.ಅ | ಅಂ.ಅ | GM | P.H |
| 9 | ಕುಂದಗೋಳ | ಶಿರೂರ | ನಿವೃತ್ತಿ | 29-02-2020 | ಪ.ಜಾ | ಮ.ಅ | SC | WOMEN |
| 10 | ಹುಬ್ಬಳ್ಳಿ | ಬೆಳಗಲಿ | ಮರಣ | 18-02-2021 | ಸಾ.ಅ | ಮ.ಅ | GM | WOMEN |
| 11 | ಕುಂದಗೋಳ | ಯರಗುಪ್ಪಿ | ನಿವೃತ್ತಿ | 31-07-2021 | ಪ್ರ.ವರ್ಗ (2ಬಿ) | ಇತರೆ | C-II(B) | OTHER |
| 12 | ಅಳ್ನಾವರ | ಅರವಟಗಿ | ಮರಣ | 27-10-2021 | ಸಾ.ಅ | ಗ್ರಾ ಅ | GM | RURAL |
| 13 | ಧಾರವಾಡ | ಬೇಲೂರು | ಮರಣ | 11-11-2021 | ಪ್ರವರ್ಗ (2ಎ). | ಮ. ಅ | C-II A | WOMEN |
| 14 | ಕಲಘಟಗಿ | ಗಂಭ್ಯಾಪೂರ | ನಿವೃತ್ತಿ | 30-04-2022 | ಸಾ.ಅ | ಇತರೆ | GM | OTHER |
| 15 | ಕಲಘಟಗಿ | ಸೂರಶೆಟ್ಟಿಕೊಪ್ಪ | ಮರಣ | 11-07-2022 | ಪ.ಜಾ | ಗ್ರಾ ಅ | SC | RURAL |
| 16 | ನವಲಗುಂದ | ಬೆಳವಟಗಿ (ಅಮರಗೋಳ) | ನಿವೃತ್ತಿ | 31-08-2022 | ಸಾ.ಅ | ಮ ಅ | GM | WOMEN |
| 17 | ಹುಬ್ಬಳ್ಳಿ | ಅಗಡಿ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ್ರ.ವರ್ಗ (3ಎ) | ಇತರೆ | C-III A | OTHER |
| 18 | ಹುಬ್ಬಳ್ಳಿ | ಚನ್ನಾಪೂರ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ.ಪಂ | ಮ.ಅ | ST | WOMEN |
| 19 | ಧಾರವಾಡ | ಚಿಕ್ಕಮಲ್ಲಿಗವಾಡ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ್ರ.ವರ್ಗ (3ಬಿ) | ಇತರೆ | C-III B | OTHER |
| 20 | ಹುಬ್ಬಳ್ಳಿ | ದೇವರಗುಡಿಹಾಳ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಸಾ.ಅ | ಗ್ರಾ.ಅ | GM | RURAL |
| 21 | ಅಣ್ಣಿಗೇರಿ | ನಾವಳ್ಳಿ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ್ರ.ವರ್ಗ(2 ಎ) | ಗ್ರಾ.ಅ | C-II A | RURAL |
| 22 | ಕುಂದಗೋಳ | ಪಶುಪತಿಹಾಳ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಸಾ.ಅ | ಮಾ.ಸೈ | GM | EX -ARMY |
| 23 | ನವಲಗುಂದ | ಬೆಳೆಹಾರ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ.ಜಾ | ಅಂ.ಅ | SC | P.H |

| | | | | | | | | |
|---|---|---|---|---|---|---|---|---|
| 24 | ಹುಬ್ಬಳ್ಳಿ | ಭಂಡಿವಾಡ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಸಾ.ಅ | ಮ.ಅ | GM | WOMEN |
| 25 | ಹುಬ್ಬಳ್ಳಿ | ಮಲ್ಲಿಗವಾಡ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ್ರವರ್ಗ (2ಎ) | ಅಂ.ಅ | C-II A | P.H |
| 26 | ಹುಬ್ಬಳ್ಳಿ | ಶರೇವಾಡ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಸಾ.ಅ | ಮ.ಅ | GM | WOMEN |
| 27 | ಅಣ್ಣಿಗೇರಿ | ಸಾಸ್ವಿಹಳ್ಳಿ | (ಹೊಸ ಗ್ರಾ.ಪಂ ಗ್ರಂಥಾಲಯ) | 19-12-2022 | ಪ.ಜಾ | ಮ.ಅ | SC | WOMEN |
| 28 | ನವಲಗುಂದ | ಅಳಗವಾಡಿ | ನಿವೃತ್ತಿ | 30-06-2023 | ಸಾ.ಅ | ಗ್ರಾ.ಅ | GM | RURAL |
| 29 | ನವಲಗುಂದ | ಯಮನೂರ | ನಿವೃತ್ತಿ | 30-06-2023 | ಪ್ರವರ್ಗ (2ಎ) | ಮ.ಅ | C-II A | WOMEN |
| 30 | ಕುಂದಗೋಳ | ಮಳಲಿ | ವರ್ಗಾವಣೆ | 07-11-2023 | ಸಾ.ಅ | ಕ.ಮಾ.ಅ | GM | KANNADA LANGUAGE |
| 31 | ಧಾರವಾಡ | ಅಮ್ಮಿನಭಾವಿ | ನಿವೃತ್ತಿ | 31-05-2024 | ಪ್ರವರ್ಗ-1 | ಮ.ಅ | C-I | WOMEN |
| 32 | ಅಳ್ನಾವರ | ಹೊನ್ನಾಪೂರ | ನಿವೃತ್ತಿ | 31-07-2024 | ಪ.ಪಂ | ಗ್ರಾ.ಅ | ST | RURAL |

1) **ಶೈಕ್ಷಣಿಕ ವಿದ್ಯಾರ್ಹತೆ:**

- ದ್ವಿತೀಯ ಪದವಿ ಪೂರ್ವ ಪರೀಕ್ಷೆ (ಪಿ.ಯು.ಸಿ) ಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಪ್ರಮಾಣಪತ್ರ ಪಡೆದಿರತಕ್ಕದ್ದು ಹಾಗೂ ಕನಿಷ್ಠ ಮೂರು ತಿಂಗಳ ಕಂಪ್ಯೂಟರ್ ಕೋರ್ಸ್ ನಲ್ಲಿ ಉತ್ತೀರ್ಣರಾಗಿರಬೇಕು.
- ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರಬೇಕು. ವಿದ್ಯಾರ್ಹತೆಯ ದಾಖಲಾತಿಗಳ ನೈಜತೆ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ದೃಢಪಡಿಸಿಕೊಂಡು ನಂತರ ನೇಮಕಾತಿ ಆದೇಶ ನೀಡಲಾಗುವುದು.
- ಒಂದು ವೇಳೆ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮನಾದ (Equal) ಅಂಕಗಳ ಮೆರಿಟ್ ಹೊಂದಿದ್ದು, ವಯಸ್ಸಿನಲ್ಲಿ ಹಿರಿಯರಾದವರನ್ನು ಆಯ್ಕೆ ಮಾಡಲಾಗುವುದು. ಅದರಂತೆ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗುವುದು.

2) **ವಾಸಸ್ಥಳ:**

ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಗ್ರಾಮ ಪಂಚಾಯತ ವ್ಯಾಪ್ತಿಯ ನಿವಾಸಿಯಾಗಿರತಕ್ಕದ್ದು, ಪರಂತು ಸಂಬಂಧ ಪಟ್ಟ ಗ್ರಾಮ ಪಂಚಾಯತ ವ್ಯಾಪ್ತಿಯ ನಿವಾಸಿ ಲಭ್ಯತೆ ಇಲ್ಲದೆ ಇದ್ದಲ್ಲಿ ಆಯಾ ತಾಲೂಕು ಪಂಚಾಯಿತಿಯ ವ್ಯಾಪ್ತಿಯಲ್ಲಿನ ಬೇರೆ ಗ್ರಾಮ ಪಂಚಾಯತ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

**ವಿ. ಸೂ:** ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವಾದ ತಹಶೀಲ್ದಾರ ಇವರಿಂದ ವಾಸಸ್ಥಳ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

3) **ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯು ಈ ಕೆಳಕಂಡಂತೆ ಇರತಕ್ಕದ್ದು.

| | | |
|---|---|---|
| ಎ) | ಸಾಮಾನ್ಯ ವರ್ಗ | 35 ವರ್ಷ |
| ಬಿ) | 2ಎ, 2ಬಿ, 3ಎ, 3ಬಿ | 38 ವರ್ಷ |
| ಸಿ) | ಪ.ಜಾತಿ/ ಪ. ಪಂಗಡ/ಪ್ರ-1 | 40 ವರ್ಷ |

**ವಯೋಮಿತಿ ಸಡಿಲಿಕೆ:**

ಕರ್ನಾಟಕ ನಾಗರೀಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮ 1977 ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಈ ಕೆಳಗೆ ತಿಳಿಸಿರುವಂತೆ ಪರಿಗಣಿಸಲಾಗುವುದು.

| | | |
|---|---|---|
| 1) | ಮಾಜಿ ಸೈನಿಕನಾಗಿದ್ದಲ್ಲಿ | ಸೇವೆ ಸಲ್ಲಿಸಿರುವಷ್ಟು ವರ್ಷಗಳಿಗೆ 03 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು |
| 2) | ವಿಶೇಷ ಚೇತನ ಅಭ್ಯರ್ಥಿಗಳಿಗೆ | 10 ವರ್ಷಗಳು |
| 3) | ವಿಧವೆಯಾಗಿದ್ದಲ್ಲಿ (ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರು ಮದುವೆಯಾಗಿರುದಿಲ್ಲವೆಂಬ ಪ್ರಮಾಣ ಪತ್ರ) | 10 ವರ್ಷಗಳು |

ಮೇಲ್ಕಂಡ ಗರಿಷ್ಠ ವಯೋಮಿತಿಯ ಅಲ್ಲದೆ ವಿಧವೆಯರು, ಮಾಜಿ ಸೈನಿಕರು ಮುಂತಾದ ವರ್ಗದವರಿಗೆ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಕಲ್ಪಿಸುವುದು, ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ಅವರ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣಪತ್ರ (ವರ್ಗಾವಣೆ ಪತ್ರ) ಕ್ಯುಮುಲೇಟಿವ್ ರೆಕಾರ್ಡ್ಸ್‌ನಲ್ಲಿ ಇರುವಂತೆ ಪರಿಗಣಿಸಲಾಗುವುದು ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

- **ಮಾಜಿ ಸೈನಿಕ:**

  ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಸಶಸ್ತ್ರದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿ ಒಟ್ಟು ವರ್ಷಗಳನ್ನು ಪರಿಗಣಿಸಲಾಗುವುದು.

- **ಅಂಗವಿಕಲ ಅಭ್ಯರ್ಥಿ:**

  ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/149/ಎಸ್ ಆರ್ ಆರ್/2020. ದಿನಾಂಕ:25-09-2020ರಲ್ಲಿ ನಿಗದಿ ಪಡಿಸಿದಂತೆ ಅಂಗವಿಕಲ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಗೊತ್ತುಪಡಿಸಿದ ಸಮತಳ ಮೀಸಲಾತಿಯ ಅನುಸಾರ ಅವಕಾಶ ಹಾಗೂ ನಿಗದಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡಿರತಕ್ಕದ್ದು, ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.

- **ಯೋಜನಾ ನಿರಾಶ್ರಿತ ಅಭ್ಯರ್ಥಿ:**

  ಸರಕಾರದ ಆದೇಶ ಸಂ:ಸಿಆಸುಇ 23 ಸೆನೆನಿ 99 ದಿನಾಂಕ:23-11-2000ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳು ಈ ಮೀಸಲಾತಿಗೆ ಅನ್ವಯವಾಗುವುದಿಲ್ಲ) ಈ ಮೀಸಲಾತಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಸಿಲ್ದಾರ್ ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

- **ತೃತೀಯಲಿಂಗ ಅಭ್ಯರ್ಥಿಗಳು:**

  ತೃತೀಯ ಲಿಂಗ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಸಂಬಂಧಿಸಿದ ಜಿಲ್ಲಾ ಮ್ಯಾಜಿಸ್ಟ್ರೇಟ್ ರವರಿಂದ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಲಗತ್ತಿಸುವುದು (ಮೀಸಲಾತಿ ಕೋರಿದ್ದಲ್ಲಿ).

- **ಗ್ರಾಮೀಣ ಅಭ್ಯರ್ಥಿ:**

  ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 01 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು ಈ ಪ್ರಮಾಣ ಪತ್ರಗಳು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು ಮತ್ತು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

**ಸೂಚನೆ:**

ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.

- **ಕನ್ನಡ ಮಾಧ್ಯಮ ಅಭ್ಯರ್ಥಿ:**

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 01 ನೇ ತರಗತಿಯಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆಯತಕ್ಕದ್ದು

**ವಿಶೇಷ ಸೂಚನೆ:**

ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು.

4) **ಜನ್ಮ ದಿನಾಂಕ:**

ಎಸ್.ಎಸ್.ಎಲ್.ಸಿ ಅಥವಾ ವರ್ಗಾವಣೆ ಪ್ರಮಾಣ ಪತ್ರ (ಟಿಸಿ) ನಮೂದಿಸಿರುವ ಜನ್ಮ ದಿನಾಂಕವನ್ನು ಆಯ್ಕೆ ಪ್ರಾಧಿಕಾರವು ಪರಿಗಣಿಸುತ್ತದೆ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸುವುದಿಲ್ಲ.

5) **ಅರ್ಜಿ ಸಲ್ಲಿಸುವ ವಿಧಾನ:**

ಅಂತರ್ಜಾಲದ ಮೂಲಕ ಪ್ರಕಟಿಸಲಾಗುವ ನಿಗದಿತ ಲಿಂಕಿನಲ್ಲಿ ಅರ್ಜಿಯನ್ನು ಸಲ್ಲಿಸುವುದು.

6) **ಅರ್ಜಿ ಶುಲ್ಕ**

| | |
|---|---|
| ಸಾಮಾನ್ಯ ಅರ್ಭರ್ಥಿಗಳಿಗೆ | ರೂ.500/– |
| ಪ್ರವರ್ಗ 2A, 2B, 3A,3B ಅರ್ಭರ್ಥಿಗಳಿಗೆ | ರೂ.300/– |
| ಪ.ಜಾ ಮತ್ತು ಪ.ಪಂ, ಪ್ರವರ್ಗ 1 ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ | ರೂ.200/– |
| ವಿಶೇಷ ಚೇತನ ಅಭ್ಯರ್ಥಿಗಳಿಗೆ | ರೂ.100/– |

7) **ಅರ್ಜಿ ಶುಲ್ಕ ಪಾವತಿಸುವ ವಿಧಾನ:**

ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನ್ನು ಆನ್ ಲೈನ್ ನಲ್ಲಿ ಅರ್ಜಿಸಲ್ಲಿಸುವಾಗ ಕಡ್ಡಾಯವಾಗಿ ಅಪಲೋಡ ಮಾಡುವುದು.

| ಅ.ನಂ | ಖಾತೆದಾರರ ಹೆಸರು | ಬ್ಯಾಂಕಿನ ಹೆಸರು | ಬ್ಯಾಂಕ್ ಶಾಖೆಯ ಹೆಸರು | ಖಾತೆಯ ನಂಬರ | IFSC Code No. |
|---|---|---|---|---|---|
| 1 | CEO CAD LIBRARY CESS ACCOUNT ZP DHARWAD | AXIS BANK | TOLLNAKA DHARWAD | 924010012148268 | UTIB0000603 |

ಅರ್ಜಿ ಶುಲ್ಕವನ್ನು ಪಾವತಿಸದೇ ಹಾಗೂ ದಾಖಲೆಗಳನ್ನು/ಭಾವ ಚಿತ್ರ/ಸಹಿಯನ್ನು ಅಪಲೋಡ್ ಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಒಮ್ಮೆ ಅರ್ಜಿಯ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂಧರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಇತರೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

8) **ಜಾತಿ ಮೀಸಲಾತಿ ಪ್ರಮಾಣ ಪತ್ರ:**

ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರ್ ರವರಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ಒಳಗಾಗಿ ಪಡೆದಿರಬೇಕು.

**ಜಾತಿ ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು.**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ತಹಶೀಲ್ದಾರ್ ರವರಿಂದ ಪ್ರಮಾಣಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವನ್ನು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.
- ಪ್ರವರ್ಗ–1 ರ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ತಹಶೀಲ್ದಾರ್ ರವರಿಂದ ಪ್ರಮಾಣಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವನ್ನು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.
- ಪ್ರವರ್ಗ–1, 2a, 2b, 3a, ಹಾಗೂ 3 ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಂಬಂಧಿತ ತಹಶೀಲ್ದಾರ್ ರವರಿಂದ ಪ್ರಮಾಣಪತ್ರವನ್ನು ಪಡೆದಿರಬೇಕು ಈ ಪ್ರಮಾಣ ಪತ್ರವನ್ನು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.

9) **ಆಯ್ಕೆ ವಿಧಾನ:**

1. ಶೈಕ್ಷಣಿಕ ವಿದ್ಯಾರ್ಹತೆಯಾದ ಪದವಿ ಪೂರ್ವ ಪರೀಕ್ಷೆಯಲ್ಲಿ (ಪಿಯುಸಿ) ಗಳಿಸಿದ ಒಟ್ಟು ಅಂಕಗಳ ಶೇ.70 ರಷ್ಟು, ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ಪದವಿ ಪಡೆದ ಅಭ್ಯರ್ಥಿಗೆ ಶೇ.20 ಮತ್ತು ಕನಿಷ್ಠ ಮೂರು ತಿಂಗಳ ಕಂಪ್ಯೂಟರ್ ಕೋರ್ಸ (ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ) ಮಾಡಿದ ಅಭ್ಯರ್ಥಿಗೆ ಶೇ.10 ರಷ್ಟು ಹೀಗೆ ಒಟ್ಟಾರೆಯಾಗಿ ಶೇ.100 ರಷ್ಟು ಅಂಕಗಳನ್ನು ಸೇರಿ ಮೆರಿಟ್ ಆಧಾರಿತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು.

   **(ಉದಾಹರಣೆ)**

   - ಅಭ್ಯರ್ಥಿಯು ಪಿ.ಯು.ಸಿಯಲ್ಲಿ ಒಟ್ಟು ಅಂಕಗಳು 600 ಅದರಲ್ಲಿ 480 ಅಂಕಗಳನ್ನು ಪಡೆದಿದ್ದರೆ ಅದು ಶೇ.80.00% ಆಗುತ್ತದೆ. ಅದರಂತೆ ಅವನಿಗೆ ಶೇ.70% ಅಂದರೆ 336 ಅಂಕಗಳನ್ನು ಪರಿಗಣಿಸಿ ಶೇ.56ರಷ್ಟು ಆಗುತ್ತದೆ.
   - ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ಪದವಿ ಪಡೆದಿದ್ದಲ್ಲಿ ಶೇ.20 ರಷ್ಟು
   - ಕನಿಷ್ಠ ಮೂರು ತಿಂಗಳ ಕಂಪ್ಯೂಟರ್ ಕೋರ್ಸ (ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ) ಮಾಡಿದ ಅಭ್ಯರ್ಥಿಗೆ ಶೇ.10 ರಷ್ಟು
   - ಹೀಗೆ ಒಟ್ಟಾರೆಯಾಗಿ **86 ಅಂಕಗಳು** ಗಣನೆಗೆ ತೆಗೆದುಕೊಳ್ಳಲಾಗುವದು.

2. ಹೀಗೆ ಮೇಲೆ ವಿವರಿಸಿರುವ ಉದಾಹರಣೆಯಂತೆ, ಶೈಕ್ಷಣಿಕ ಅರ್ಹತೆಯಲ್ಲಿನ ಮೆರಿಟ್ ಮತ್ತು ರೋಸ್ಟರ್ ಮೀಸಲಾತಿ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಒಂದು ವೇಳೆ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನವಾದ ಅಂಕಗಳನ್ನು/ಮೆರಿಟ್‌ನ್ನು ಹೊಂದಿದ್ದಲ್ಲಿ ವಯಸ್ಸಿನಲ್ಲಿ ಹಿರಿಯರಾದವರನ್ನು ಆಯ್ಕೆಗೆ ಪರಿಗಣಿಸಲಾಗುವುದು.
3. ಆಯ್ಕೆ ಸಮಿತಿಯೂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಹುದ್ದೆಗೆ ಸಂಬಂಧಿಸಿದಂತೆ ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿದ್ದಲ್ಲಿ ಪಿ.ಯು.ಸಿ ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳನ್ನು ಆಧರಿಸಿ ಅಧಿಸೂಚಿಸಿದ ಖಾಲಿ ಹುದ್ದೆಗಳಿಗೆ ರೋಸ್ಟರ್ ಬಿಂದುವಿನಂತೆ ಸಮನಾಗಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದವಾರು ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು. ಒಂದು ವೇಳೆ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನವಾದ ಅಂಕಗಳನ್ನು/ಮೆರಿಟನ್ನು ಹೊಂದಿದ್ದಲ್ಲಿ ವಯಸ್ಸಿನಲ್ಲಿ ಹಿರಿಯರಾದವರನ್ನು ಆಯ್ಕೆಗೆ ಪರಿಗಣಿಸಲಾಗುವುದು. ಮತ್ತು ಅದರಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.
4. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಯಾ ಗ್ರಾಮ ಪಂಚಾಯತಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ/ಸಲಹೆಗಾಗಿ ಹದಿನೈದು ದಿನಗಳ ಕಾಲಾವಕಾಶವನ್ನು ನೀಡಲಾಗುವುದು ಮತ್ತು ಆಕ್ಷೇಪಣೆ/ಸಲಹೆಗಳು ಇದ್ದಲ್ಲಿ ಲಿಖಿತ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಜಿಲ್ಲಾ ಪಂಚಾಯತ ಧಾರವಾಡ ಪ್ರಧಾನ ಕಾರ್ಯಾಲಯಕ್ಕೆ ಸಲ್ಲಿಸುವುದು.

   ಸದರಿ ಆಕ್ಷೇಪಣೆ/ಸಲಹೆಗಳನ್ನು ಪರಿಶೀಲಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಆಯಾ ಗ್ರಾಮ ಪಂಚಾಯತಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

10) **ವೇತನ:**

ಸರ್ಕಾರದ ಆದೇಶ ಸಂ: ಆರ್.ಡಿ.ಪಿ.ಆರ್/425/ಜಿಪಅ/2023 ದಿನಾಂಕ: 13-02-2024ರಂತೆ ಗ್ರಾಮ ಪಂಚಾಯತ ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರತಿ ಮಾಹೆ ಮಾಸಿಕ ಕನಿಷ್ಠ ವೇತನ ರೂ.16.382.52 ಪೈಸೆ ಹಾಗೂ ಕನಿಷ್ಠ ವೇತನ ಜೊತೆಗೆ ಕಾರ್ಮಿಕ ಇಲಾಖೆ ಕಾಲಕಾಲಕ್ಕೆ ನಿಗದಿಪಡಿಸುವ ವ್ಯತ್ಯಯವಾಗುವ ತುಟ್ಟಿ ಭತ್ಯೆಯನ್ನು (ವಿ.ಡಿ.ಎ) ಪಾವತಿಸಲಾಗುವುದು.

**ಸಾಮಾನ್ಯ ಸೂಚನೆಗಳು:**

1. ಭಾರತೀಯ ನಾಗರೀಕನಾಗತಕ್ಕದ್ದು.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್.ಡಿ.ಪಿ.ಆರ್/156/ಜಿಪಿಎ/2022 (ಇ) ದಿ: 14-11-2022ರ ಪ್ರಕಾರ ಅಧಿಸೂಚಿಸಿದ ಹುದ್ದೆಗಳ ನೇಮಕಾತಿಗೆ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿದೆ.
3. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದು, ಜಿಲ್ಲೆಯನ್ನು ರೋಸ್ಟರ್ ಬಿಂದುಗಾಗಿ ಒಂದು ಯುನಿಟ್ ಎಂದು ಪರಿಗಣಿಸಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನುಸಾರ ಕ್ರಮವಹಿಸುವ ಷರತ್ತುಗಳಿಗೊಳಪಟ್ಟಿರುತ್ತದೆ.
4. ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸುವ ಮುನ್ನ ಮೆರಿಟ್ ಹಾಗೂ ಸಮತಳ ಮೀಸಲಾತಿ ಆಧಾರದ ಮೇಲೆ ಮೂಲ ದಾಖಲಾತಿ ಪರಿಶೀಲನೆ ಮಾಡಲಾಗುವುದು.
5. ಅಭ್ಯರ್ಥಿಯ ನೈಜತೆ ದೃಢಪಡದೇ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
6. ಈ ಮೇಲ್ಕಂಡ ನೇಮಕಾತಿಯು ಸರ್ಕಾರದ ಅಧಿಸೂಚನೆ ಸಂ: ಆರ್.ಡಿ.ಪಿ.ಆರ್/156/ಜಿಪಿಎ/2022 (ಇ) ದಿನಾಂಕ: 14-11-2022ರ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ. ಸದರಿ ಹುದ್ದೆಗಳ ಆಯ್ಕೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಆಯ್ಕೆ ಸಮಿತಿಯ ನಿರ್ಣಯಗಳು ಅಂತಿಮವಾಗಿರುತ್ತದೆ.

7. ಹೆಚ್ಚಿನ ಮಾಹಿತಿಗಾಗಿ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಧಾರವಾಡ ದೂರವಾಣಿ ಸಂಖ್ಯೆ:0836-2742221ಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು.
8. ಅಭ್ಯರ್ಥಿಯು ಚುನಾವಣಾ ಗುರುತಿನ ಚೀಟಿ, ಕುಟುಂಬ ಪಡಿತರ ಚೀಟಿ ಮತ್ತು ಆಧಾರ ಕಾರ್ಡ ಅಥವಾ ಇನ್ನಿತರೇ ಗುರುತಿನ ಚೀಟಿಯನ್ನು ಲಗತ್ತಿಸಬೇಕು.
9. ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು ಕಂಡುಬಂದಲ್ಲಿ, ನೇಮಕಾತಿಗೆ ಅನರ್ಹರಾಗಿರುತ್ತಾರೆ.
10. ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.
11. ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆ ಪಟ್ಟಿಯಲ್ಲಿ ಬಂದಿದೆ ಎಂಬುದರ ಆಧಾರದ ಮೇಲೆ ಅಭ್ಯರ್ಥಿಗೆ ನೇಮಕಾತಿಯ ಯಾವುದೇ ಹಕ್ಕು ದೊರೆಯುವುದಿಲ್ಲ.
12. ನೇಮಕಾತಿ ಪಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿ ಮುಂದೂಡುವ, ರದ್ದುಗೊಳಿಸುವ ಮತ್ತು ನಿರ್ಬಂಧನೆಗಳನ್ನು ಬದಲಾಯಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರ ಹೊಂದಿರುತ್ತದೆ.
13. ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ದಿನಾಂಕವು ಸಾರ್ವಜನಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೇ ದಿನವನ್ನು ಅರ್ಜಿ ಸ್ವೀಕರಿಸಲು ಕೊನೆ ದಿನಾಂಕವಾಗಿರುತ್ತದೆ.

ಆನಲೈನ್ ಅರ್ಜಿಗಳನ್ನು ಸಲ್ಲಿಸಲು ಈ ಕೆಳಕಂಡ ವೆಬಸೈಟ್ ನಲ್ಲಿ ಪಡೆಯುವುದು.

**Website Address: https://** zpdharwad.karnataka.gov.in

| ಅರ್ಜಿಗಳನ್ನು ಪ್ರಾರಂಭ ಮಾಡುವ ದಿನಾಂಕ | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ |
|---|---|
| 05.11.2024 | 04.12.2024 |

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂದಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Schedule Caste |
| ಪ.ಪಂ | ಪರಿಶಿಷ್ಟ ಪಂಗಡ | ST | Schedule Tribe |
| ಪ್ರ–1 | ಪ್ರವರ್ಗ–1 | Cat-1 | Category-1 |
| 2ಎ | ಪ್ರವರ್ಗ–2ಎ | 2A | Catergory-2A |
| 2ಬಿ | ಪ್ರವರ್ಗ–2ಬಿ | 2B | Category-2B |
| 3ಎ | ಪ್ರವರ್ಗ–3ಎ | 3A | Category-3A |
| 3ಬಿ | ಪ್ರವರ್ಗ–3ಬಿ | 3B | Category-3B |
| ಮಾ.ಸೈ | ಮಾಜಿ ಸೈನಿಕ | Ex-MP | Ex-Military-Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | Rural | Rural Candidate |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMC | Kannada Medium Candidate |
| ಯೋ.ಅ | ಯೋಜನಾ ನಿರಾಶ್ರಿತ | PDP | Project Displaced Candidate |
| ಅಂ.ವಿ | ಅಂಗವಿಕಲ | PH | Physical Handicapped person |
| ತೃ.ಲಿ | ತೃತಿಯ ಲಿಂಗ | TG | Transgender |

14/10/24

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ
ಅಧ್ಯಕ್ಷರು ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ
ಆಯ್ಕೆ ಸಮಿತಿ, ಜಿಲ್ಲಾ ಪಂಚಾಯತ ಧಾರವಾಡ

ಪ್ರತಿಗಳು:

1. ಮಾನ್ಯ ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಗಾಂಧಿ ನಗರ ಬೆಂಗಳೂರು ರವರ ಮಾಹಿತಿಗಾಗಿ.
2. ಉಪ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಧಾರವಾಡ ರವರಿಗೆ ರವಾನಿಸುತ್ತಾ ರಾಜ್ಯ ಮತ್ತು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ವಿತರಣೆಯಾಗುವ ಕನಿಷ್ಟ ಒಂದು ಕನ್ನಡ ದಿನಪತ್ರಿಕೆಯಲ್ಲಿ ಸದರಿ ಅಧಿಸೂಚನೆಯನ್ನು ಉಚಿತವಾಗಿ ಪ್ರಕಟಿಸಲು ಕೋರಲಾಗಿದೆ.
3. ಮುಖ್ಯ ಗ್ರಂಥಾಲಯಾಧಿಕಾರಿಗಳು, ಜಿಲ್ಲಾ ಕೇಂದ್ರ ಗ್ರಂಥಾಲಯ ಧಾರವಾಡ ಮಾಹಿತಿಗಾಗಿ.
4. ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್ ಇವರ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಹಾಗೂ ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಯ ಹಾಗೂ ತಮ್ಮ ಗ್ರಾಮ ಪಂಚಾಯತಿ ಮಟ್ಟದ ಎಲ್ಲಾ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಸೂಚಿಸಿದೆ.
5. ಕಛೇರಿ ಕಡತಕ್ಕೆ.

೨೫/೧೧/೨೦೨೪

J:\Anuradha ...\Final Notification 24-07-2024.docx

# ಜಿಲ್ಲಾ ಪಂಚಾಯತ ಕಾರ್ಯಾಲಯ, ಧಾರವಾಡ

## ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಮೇಲ್ವಿಚಾರಕರ ಹುದ್ದೆಯ ನೇಮಕಾತಿಗೆ

## ಅರ್ಜಿ ನಮೂನೆ

ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಹೆಸರು:--------- ದಿನಾಂಕ:-----------

ಭಾವಚಿತ್ರದ ಸಹಿಯೊಂದಿಗೆ

01. ಅಭ್ಯರ್ಥಿಯ ಹೆಸರು: ---------------
02. ತಂದೆಯ ಹೆಸರು: -------------
03. ತಾಯಿಯ ಹೆಸರು:---------------
04. ಹುಟ್ಟಿದ ದಿನಾಂಕ ಹಾಗೂ ವಯಸ್ಸು: ---------------
05. ಲಿಂಗ: ------------------
06: ರಾಷ್ಟ್ರೀಯತೆ: ----------------
07. ಜಾತಿ: -----------------
08: ಉಪಜಾತಿ: -----------------
09. ಅಂಚೆ ವಿಳಾಸ: ----------------
10. ಖಾಯಂ ವಿಳಾಸ: --------------
11. ವಿದ್ಯಾರ್ಹತೆ:

| | | | | |
|---|---|---|---|---|
| ಎ. | ಎಸ್.ಎಸ್.ಎಲ್.ಸಿ | ಜನ್ಮ ದಿನಾಂಕ | ವಯಸ್ಸು | |
| | | | | |
| ಬಿ. | ದ್ವಿತಿಯ ಪಿಯುಸಿ | ಗರಿಷ್ಠ ಅಂಕ | ಪಡೆದ ಅಂಕ | ಶೇಕಡಾ |
| | | | | |
| ಸಿ. | ಗ್ರಂಥಾಲಯ ವಿಜ್ಞಾನ ತರಬೇತಿ | ಇದೆ | ಇಲ್ಲಾ | ಶೇಕಡಾ |
| | | | | |
| ಡಿ. | ಕಂಪ್ಯೂಟರ್ ಉತ್ತೀರ್ಣ ಹೊಂದಿರುವ ಪ್ರಮಾಣ ಪತ್ರ | ಅವಧಿ | ಸಂಸ್ಥೆಯ/ಏಜೇನ್ಸಿಸ್ ಹೆಸರು | |
| | | | | |

---

ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಲಗತ್ತಿಸಲಾಗಿದೆಯೇ (ಸ್ವಯಂ ಧೃಢಿಕರಿಸಿ)

a ಎಸ್ ಎಸ್ ಎಲ್ ಸಿ ಅಂಕಪಟ್ಟಿ ನೊಂದಣಿ ಸಂಖ್ಯೆ/ವರ್ಷ :
b ವರ್ಗಾವಣೆ ಪ್ರಮಾಣ ಪತ್ರ :
c ದ್ವಿತಿಯ ಪಿಯುಸಿ ಅಂಕಪಟ್ಟಿ ನೊಂದಣಿ ಸಂಖ್ಯೆ/ವರ್ಷ :
d ತಹಸೀಲದಾರರಿಂದ ಪಡೆದು 0 ಇರುವ ಸ್ಥಳೀಯ ನಿವಾಸಿ ಪ್ರಮಾಣ ಪತ್ರ :
e ಜಾತಿ ಮತ್ತು ಆದಾಯ ಪ್ರಮಾಣ ಪತ್ರ (RD N0) :
f. ಚುನಾವಣಾ ಗುರುತಿನ ಚೀಟಿ, ಕುಟುಂಬ ಪಡಿತರ ಚೀಟಿ & ಆಧಾರ ಕಾರ್ಡ :
g ಅಂಗವಿಕಲ ಅಭ್ಯರ್ಥಿಗಳ ಪ್ರಮಾಣ ಪತ್ರ :
h ಮಾಜಿ ಸೈನಿಕ ಅಭ್ಯರ್ಥಿಗಳ ಪ್ರಮಾಣ ಪತ್ರ :
i. ಗ್ರಾಮೀಣ ಅಭ್ಯರ್ಥಿ/ಕನ್ನಡ ಮಾಧ್ಯಮ ಪ್ರಮಾಣ ಪತ್ರ :
j. ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ :
k ತೃತೀಯ ಲಿಂಗ ಪ್ರಮಾಣ ಪತ್ರ :
l. ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ಪದವಿ ಪ್ರಮಾಣ ಪತ್ರ :
m ಕನಿಷ್ಠ ಮೂರು ತಿಂಗಳ ಕಂಪ್ಯೂಟರ್ ಕೋರ್ಸ ಪ್ರಮಾಣ ಪತ್ರ :
(ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ)

ವಿ.ಸೂ: ಸ್ವಯಂ ದೃಡೀಕರಿಸಿದ ದಾಖಲೆಗಳನ್ನು ಅರ್ಜಿ ನಮೂನೆ ಜೊತೆ ಲಗತ್ತಿಸುವುದು
ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳನ್ನು ಸರಿಯಾಗಿದೆ ಎಂದು ಈ ಮೂಲಕ ದೃಡೀಕರಿಸಿರುತ್ತೇನೆ.

ಸ್ಥಳ: ಧಾರವಾಡ
ದಿನಾಂಕ:

ಅಭ್ಯರ್ಥಿ ಸಹಿ